**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:8**

**ಸ್ಪೆಷಲ್ ಕೇಸ್ ಸಂಖ್ಯೆ: 510/23 ಸಿಡಬ್ಲ್ಯೂ:12**

**ಸಾಕ್ಷಿದಾರರ ಹೆಸರು** : ಸುಧಾಕರ ಶೆಟ್ಟಿ

**ತಂದೆ ಹೆಸರು** : ಕೃಷ್ಣಪ್ಪ ಶೆಟ್ಟಿ

**ವಯಸ್ಸು** : 54

**ವೃತ್ತಿ** : ಗುತ್ತಿಗೆದಾರ

**ವಾಸ** : ನಾಡಗುಡ್ಡೆಯಂಗಡಿ ಗ್ರಾಮ

**ದಿನಾಂಕ: 28-04-2026 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ನಾಡಗುಡ್ಡೆಯಂಗಡಿಯ ಪ್ರಸನ್ನ ಗಣಪತಿ ದೇವಸ್ಥಾನದಲ್ಲಿ ಪ್ರತೀ ವರ್ಷ ನಾವು ಗಣೇಶನ ಮೂರ್ತಿ ಇರಿಸಿ ನಂತರ ವಿಸರ್ಜನೆ ಮಾಡಿಸುತ್ತೇವೆ. ಚಾಸಾ.10 ರವರು ಈ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ನಾನು ಕಾರ್ಯದರ್ಶಿಯಾಗಿರುತ್ತೇನೆ. ನನಗೆ ಈ ಪ್ರಕರಣದ ಆರೋಪಿತರ ಪರಿಚಯ ಇದೆ. ಚಾಸಾ.1 ರಿಂದ 5 ರವರ ಪರಿಚಯ ಇದೆ. ದಿನಾಂಕ:20-09-2023 ರಂದು ನಮ್ಮ ಗಣಪತಿ ಮೂರ್ತಿ ವಿಸರ್ಜನೆ ಮೆರವಣಿಗೆಯಲ್ಲಿ ಆರೋಪಿಗಳಿಗೂ ಹಾಗೂ ಚಾಸಾ.1 ಮತ್ತು 4 ರವರಿಗೂ ಗಲಾಟೆ ಆದ ವಿಚಾರ ನನಗೆ ಗೊತ್ತಿಲ್ಲ. ನಾನು ಸ್ವದ್ರಿಯವರ ನಡುವೆ ಯಾವುದೇ ರಾಜೀ ಪಂಚ್ಯಾತಿಕೆ ಮಾಡಿಸಿಲ್ಲ. ಈ ಪ್ರಕರಣದ ಆರೋಪಿಗಳು ಚಾಸಾ.1 ರಿಂದ 4 ರವರಿಗೆ ಚಂದ್ರಿಕಾ ಬಾರ್ ಬಳಿ ಜಾತಿ ನಿಂದನೆ ಮಾಡಿ ಹಲ್ಲೆ ಮಾಡಿದ ವಿಚಾರ ನನಗೆ ಗೊತ್ತಿಲ್ಲ. ಪೋಲೀಸರು ಈ ಪ್ರಕರಣದಲ್ಲಿ ನನ್ನನ್ನು ವಿಚಾರಿಸಿಲ್ಲ.

(ಸಾಕ್ಷಿಯು ಸಂಪೂರ್ಣ ಪ್ರತಿಕೂಲ ಸಾಕ್ಷಿಯಾದ ಕಾರಣ ಆತನನ್ನು ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿಯನ್ನು ಕೋರಿರುತ್ತಾರೆ. ಆ ಬಗ್ಗೆ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ</u> ಸರ್ಕಾರಿ ಅಭಿಯೋಜಕರಿಂದ

ದಿನಾಂಕಃ20-09-2023 ರಂದು ಗುಡ್ಡೆಯಂಗಡಿಯಲ್ಲಿರುವ ಗಣಪತಿ ದೇವಸ್ಥಾನದ ವಠಾರದಲ್ಲಿ ಗಣೇಶೋತ್ಸವ ಸೇವಾ ಸಮಿತಿಯಿಂದ ಗಣಪತಿ ಮೂರ್ತಿ ವಿಸರ್ಜನಾ ಮೆರವಣಿಗೆ ವೇಳೆಯಲ್ಲಿ 2, 3 ಮತ್ತು 5 ನೇ ಆರೋಪಿತರು ಚಾಸಾ.4 ರವರಲ್ಲಿ ಗಲಾಟೆ ಮಾಡಿದ್ದಾರೆ ಎಂದು ಅದೇ ದಿನ ಚಾಸಾ.1 ಮತ್ತು 4 ರವರು ಸಮಿತಿಯ ಮುಂದೆ ಮೌಖಿಕವಾಗಿ ದೂರು ನೀಡಿರುತ್ತಾರೆ ಎಂದರೆ ಸರಿ ಅಲ್ಲಾ. ಅದೇ ಸಮಯಕ್ಕೆ ದೇವಸ್ಥಾನಕ್ಕೆ 2, 3 ಮತ್ತು 5 ನೇ ಆರೋಪಿಗಳು ಬಂದಿರುತ್ತಾರೆ ಎಂದರೆ ಸರಿ ಅಲ್ಲಾ. ನಾನು ಹಾಗೂ ಚಾಸಾ.10 ಹಾಗೂ ಸಮಿತಿಯವರು ಎರಡೂ ಕಡೆಯವರ ನಡುವೆ ರಾಜೀ ಪಂಚ್ಯಾತಿ ಮಾಡಿಸಿ ಎರಡೂ ಕಡೆಯವರು ಪರಸ್ಪರ ಕ್ಷಮೆ ಕೇಳಿಸಿಕೊಂಡಿರುತ್ತಾರೆ ಎಂದರೆ ಸರಿ ಅಲ್ಲಾ. ಆ ದ್ವೇಷದ ಹಿನ್ನಲೆಯಲ್ಲಿ 21-09-2023 ರಂದು ರಾತ್ರಿ 10.30 ಗಂಟೆಗೆ ಚಂದ್ರಿಕಾ ಬಾರ್ ಎದುರುಗಡೆ ಈ ಪ್ರಕರಣದ ಆರೋಪಿತರು ಚಾಸಾ.1 ರಿಂದ 5 ರವರಿಗೆ ದೊಣ್ಣೆ ಮತ್ತು ಕೈಗಳಿಂದ ಹಲ್ಲೆ ಮಾಡಿ ಜಾತಿ ನಿಂದನೆ ಮಾಡಿರುತ್ತಾರೆ ಎಂದು ನನಗೆ ನಂತರ ತಿಳಿಯಿತು ಎಂದರೆ ಸರಿ ಅಲ್ಲಾ. ಈ ಬಗ್ಗೆ ನಾನು ದಿನಾಂಕಃ24-09-2023 ರಂದು ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿ ಅಲ್ಲಾ. ಸದ್ರಿ ಹೇಳಿಕೆಯನ್ನು ನಿಪಿ-23 ಎಂದು ಗುರುತಿಸಲಾಯಿತು.

ಘಟನೆ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹಾ ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ.

<u>ಪಾಟೀ ಸವಾಲುಃ</u> 1 ರಿಂದ 7 ನೇ ಆರೋಪಿ ಪರ ಶ್ರೀ ಕೆ ಪಿ ಕೆ ಎಸ್ ವಕೀಲರಿಂದ ಹಾಜರಿದ್ದು ಪಾಟೀ ಸವಾಲು ಇಲ್ಲಾ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆಃ</u> ಇಲ್ಲ.

**(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**